**9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.72/2020**

(ಚಾ.ಸಾ.19/ಪ್ರಾ.ಸಾ.14)

ತಾಃ 11.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು: | ಅನೀಲ್ ಕುಮಾರ್ |
| ತಂದೆಯ ಹೆಸರು | ರಾಜಗೋಪಾಲ |
| ವಯಸ್ಸು | 51 ವರ್ಷ |
| ಉದ್ಯೋಗ | ಡಿವೈಎಸ್ಪಿ ಲೋಕಾಯುಕ್ತ, ಬೆಂಗಳೂರು |
| ವಾಸ ಸ್ಥಳ | ಬೆಂಗಳೂರು |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು ನೆಲಮಂಗಲ ವೃತ್ತದ ವೃತ್ತ ನಿರೀಕ್ಷಕರಾಗಿ ಆಗಸ್ಟ್ 2018 ರಿಂದ ಅಕ್ಟೋಬರ್ 2019 ರವರೆಗೆ ಕರ್ತವ್ಯ ನಿರ್ವಹಿಸಿದ್ದೇನೆ. ದಿಃ08.08.2019 ರಂದು ಈ ಪ್ರಕರಣದ ಕಡತವನ್ನು ಮಾನ್ಯ ವರಿಷ್ಠಾಧಿಕಾರಿಗಳ ಆದೇಶದ ಮೇರೆಗೆ ಚಾಸಾ.17 ರವರಿಂದ ಪಡೆದುಕೊಂಡು ಪರಿಶೀಲಿಸಿ ತನಿಖೆಯನ್ನು ಮುಂದುವರೆಸಿ ಅದೇ ದಿನ ಘಟನಾ ಸ್ಥಳಕ್ಕೆ ಭೇಟಿ ನೀಡಿ ವಿಧಿ ವಿಜ್ಞಾನ ಪ್ರಯೋಗಾಲಯದ ತಜ್ಞರನ್ನು ಬರುವಂತೆ ಮನವಿ ಮಾಡಿಕೊಂಡು ಅವರು ಬಂದ ನಂತರ ಚಾಸಾ.6 ಮತ್ತು 7 ರವರಿಗೆ ನೋಟೀಸ್ ನೀಡಿ ಪಂಚನಾಮೆಗೆ ಸಹಕರಿಸುವಂತೆ ಮಾಹಿತಿ ನೀಡಿ ಚಾಸಾ.1 ರವರನ್ನು ಕರೆದುಕೊಂಡು ಕೃತ್ಯ ನಡೆದ ಸ್ಥಳದ

ಮಾಚೋಹಳ್ಳಿ ಅರಣ್ಯ ಪ್ರದೇಶಕ್ಕೆ ಹೋಗಿ ಮಧ್ಯಾಹ್ನ 1.00 ರಿಂದ 2.30 ರವರೆಗೆ ಚಾಸಾ.1 ರವರು ತೋರಿಸಿದ ಸ್ಥಳದಲ್ಲಿ ನಿ.ಪಿ.2 ರಂತೆ ಪಂಚನಾಮೆ ಮಾಡಿ, ಪಂಚನಾಮಾ ಕಾಲಕ್ಕೆ ಕೃತ್ಯಕ್ಕೆ ಉಪಯೋಗಿಸಿದ ಕೆಎ-02/ಎಎ-5919 ರ ಕಾರ್ ಅನ್ನು ಹಾಗೂ ರಕ್ತದ ಕಲೆಯಾಗಿರುವ ಒಂದು ಲಾಂಗ್, ಒಂದು ಚಾಕು, ಮಾದನಾಯಕನಹಳ್ಳಿ ಆರಕ್ಷಕ ನಿರೀಕ್ಷಕರು ಮತ್ತು ಉಪನಿರೀಕ್ಷಕರು ಫೈಯರ್ ಮಾಡಿರುವ 3 ಕಾರ್ಟ್ರೇಜ್ ಗಳನ್ನು ಹಾಗೂ ಮಾದನಾಯಕನಹಳ್ಳಿ ಆರಕ್ಷಕ ನಿರೀಕ್ಷಕರು ಮತ್ತು ಉಪನಿರೀಕ್ಷಕರು ಉಪಯೋಗಿಸುತ್ತಿದ್ದ 2 ಪಿಸ್ತೂಲ್ ಗಳನ್ನು ಹಾಗೂ ಜೀವಂತ ಇರುವ 3 ಕಾರ್ಟ್ರೇಜ್ ಗಳನ್ನು ಜಪ್ತಿಪಡಿಸಿ ಪಂಚರ ಸಹಿಗಳನ್ನು ಪಡೆದಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿ.ಪಿ.2(ಡಿ) ಎಂದು ಗುರುತಿಸಲಾಯಿತು. ಪಂಚನಾಮಾ ಕಾಲಕ್ಕೆ ನಿ.ಪಿ.3 ರಂತೆ 16 ಛಾಯಾಚಿತ್ರಗಳನ್ನು ತೆಗೆಸಿರುತ್ತೇನೆ. ಜಪ್ತಿಪಡಿಸಿದ ಮಾಲುಗಳನ್ನು ನಮ್ಮ ಠಾಣಾ ಮಾಲುಪಟ್ಟಿ ಸಂಖ್ಯೆ 144/2019 ಕ್ಕೆ ಅಳವಡಿಸಿ ನ್ಯಾಯಾಧೀಶರ ಅನುಮತಿ ಪಡೆದಿರುತ್ತೇನೆ. ಸದರಿ ಮಾಲುಪಟ್ಟಿಯನ್ನು ನಿ.ಪಿ.18 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.18(ಎ) ಎಂದು ಗುರುತಿಸಲಾಯಿತು. ಸದರಿ ಜಪ್ತಿಪಡಿಸಿದ ಮಾಲುಗಳನ್ನು ಸಾಕ್ಷಿಯು ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮಾ.1 ರಿಂದ 8 ಎಂದು ಗುರುತಿಸಲಾಗಿದೆ.

2. ಅದೇ ದಿನ ಚಾಸಾ.2 ರಿಂದ 9 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಅದೇ ದಿನ ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುಗಳ ಮತ್ತು ಆರೋಪಿಗಳ ರಕ್ತದ ಕಲೆಯಾಗಿರುವ ಬಟ್ಟೆಯನ್ನು ಸಂಗ್ರಹಿಸಿ ಕೊಡುವಂತೆ ಮನವಿ ಸಲ್ಲಿಸಿರುತ್ತೇನೆ. ಅದೇ ದಿನ ಚಾಸಾ.11 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿಃ10.08.2019 ರಂದು

ಮಾದನಾಯಕನಹಳ್ಳಿ ಪೊಲೀಸ್ ಠಾಣೆಯ ದಿನಚರಿ ವರದಿ ಮತ್ತು ಪ್ರ.ವ.ವ ಸಂಖ್ಯೆ 340/2019 ರ ಪ್ರತಿಗಳನ್ನು ನೀಡುವಂತೆ ಮನವಿ ಸಲ್ಲಿಸಿರುತ್ತೇನೆ. ದಿಃ26.08.2019 ರಂದು ಮಲ್ಲಯ್ಯ ಮಾದನಾಯಕನಹಳ್ಳಿ ಪೊಲೀಸ್ ರವರು ಗಾಯಾಳುಗಳ ಮತ್ತು ಆರೋಪಿಗಳು ಧರಿಸಿದ್ದ ರಕ್ತದ ಕಲೆಯಾಗಿರುವ ಬಟ್ಟೆಗಳನ್ನು ಅನುಪಮಾ ಆಸ್ಪತ್ರೆಯಿಂದ ತಂದು ಹಾಜರುಪಡಿಸಿದ ಮೇರೆಗೆ ಅವುಗಳನ್ನು ವಶಪಡಿಸಿಕೊಂಡು ನಮ್ಮ ಠಾಣಾ ಮಾಲುಪಟ್ಟಿ ಸಂಖ್ಯೆ 158/2019 ಕ್ಕೆ ಅಳವಡಿಸಿ ನ್ಯಾಯಾಧೀಶರ ಅನುಮತಿ ಪಡೆದಿರುತ್ತೇನೆ. ಸದರಿ ಮಾಲುಪಟ್ಟಿಯನ್ನು ನಿ.ಪಿ.19 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.19(ಎ) ಎಂದು ಗುರುತಿಸಲಾಯಿತು. ಸದರಿ ಜಪ್ತಿಪಡಿಸಿದ ಬಟ್ಟೆಗಳಾದ ಚಾಸಾ.1 ರವರ ಸಮವಸ್ತ್ರದ ಅಂಗಿಯನ್ನು ಈಗಾಗಲೇ ಮು.ಮಾ.9 ಎಂದು ಗುರುತಿಸಲಾಗಿದೆ. ಚಾಸಾ.2 ರವರ ತುಂಬು ತೋಳಿನ ಅಂಗಿಯನ್ನು ಮು.ಮಾ.10 ಎಂದು, 2 ನೇ ಆರೋಪಿ ಚರಣ್ ರವರ ನೈಟ್ ಪ್ಯಾಂಟ್ ಅನ್ನು ಮು.ಮಾ.11 ಎಂದು ಗುರುತಿಸಲಾಯಿತು. ನಂತರ ಅದೇ ದಿನ ಚಾಸಾ.10 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

3. ದಿಃ14.09.2019 ರಂದು ನೆಲಮಂಗಲ ಪೊಲೀಸ್ ಠಾಣೆಯ ಪೇದೆ ಬಸವರಾಜುರವರು ಅನುಪಮಾ ಆಸ್ಪತ್ರೆಯಿಂದ ಗಾಯಾಳುಗಳ ಮತ್ತು ಆರೋಪಿಗಳ ಗಾಯದ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ಗಾಯದ ಪ್ರಮಾಣ ಪತ್ರಗಳನ್ನು ಈಗಾಗಲೇ ನಿ.ಪಿ.4 ರಿಂದ 7 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಗಳನ್ನು ನಿ.ಪಿ.4(ಎ) ಯಿಂದ 7(ಎ) ಎಂದು ಗುರುತಿಸಲಾಯಿತು. ನಂತರ ಅದೇ ದಿನ ಚಾಸಾ.12 ರವರ ಹೇಳಿಕೆಯನ್ನು

ಪಡೆದುಕೊಂಡಿರುತ್ತೇನೆ. ದಿಃ17.09.2019 ರಂದು ನಿ.ಪಿ.18 ಮತ್ತು 19 ರ ಮಾಲಪಟ್ಟಿಗಳಲ್ಲಿ ಜಪ್ತಿಪಡಿಸಿದ ಮಾಲುಗಳಲ್ಲಿ ಕಾರ್ ಅನ್ನು ಹೊರತುಪಡಿಸಿ ಚಾಸಾ.14 ರವರ ಮೂಲಕ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ರಾಸಾಯನಿಕ ವಿಶ್ಲೇಷಣೆಗಾಗಿ ಕಳುಹಿಸಿ ಸ್ವೀಕೃತಿಯನ್ನು ಪಡೆದಿರುತ್ತೇನೆ. ಅದೇ ದಿನ ಚಾಸಾ.14 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿಃ02.10.2019 ರಂದು ಮಾದನಾಯಕನಹಳ್ಳಿ ಪೊಲೀಸ್ ಠಾಣೆಯ ದಿನಚರಿ ವರದಿ ಮತ್ತು ಪ್ರ.ವ.ವ ಸಂಖ್ಯೆ 340/2019 ರ ಪ್ರತಿಗಳನ್ನು ಪಡೆದುಕೊಂಡಿರುತ್ತೇನೆ. ಸದರಿ ದಾಖಲೆಗಳನ್ನು ಈಗಾಗಲೇ ನಿ.ಪಿ.15 ಮತ್ತು 16 ಎಂದು ಗುರುತಿಸಲಾಗಿದೆ. ಅದೇ ದಿನ ಚಾಸಾ.16 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿಃ03.10.2019 ರಂದು ಚಾಸಾ.13 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ತನಿಖೆಯನ್ನು ಪೂರೈಸಿ ಎಫ್.ಎಸ್.ಎಲ್. ವರದಿಯನ್ನು ಬಾಕಿ ಇಟ್ಟು ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಚಾಸಾ.18 ರವರು ನನ್ನ ಆದೇಶದಂತೆ ಆರೋಪಿಗಳನ್ನು ಬೇರೆ ಪ್ರಕರಣದಲ್ಲಿ ಬಂಧಿತರಾಗಿ ಜೈಲಿನಲ್ಲಿ ಇದ್ದು ಅವರನ್ನು ನ್ಯಾಯಾಲಯದ ಮೂಲಕ ಪೊಲೀಸ್ ವಶಕ್ಕೆ ಪಡೆದು ಅವರ ಹೇಳಿಕೆ ಪಡೆದು ನ್ಯಾಯಾಲಯಕ್ಕೆ ಆರೋಪಿಗಳನ್ನು ಹಾಜರುಪಡಿಸಿರುತ್ತಾರೆ. ಚಾಸಾ.10 ರವರು ನಿ.ಪಿ.14 ರಂತೆ ನನ್ನ ಮುಂದೆ ಹೇಳಿಕೆ ನೀಡಿದ್ದಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ ಸಮಯ ಕೋರಿದ್ದಾರೆ, ಸಮಯ ನೀಡಲು ಯಾವುದೇ ಸಕಾರಣಗಳನ್ನು ನೀಡಿರುವುದಿಲ್ಲ. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಿದೆ.**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ವಿಜಯ್ ಕುಮಾರ್)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.